# ‘ವಿವಾಹ್’ ಸುಂದರಿಯ ಗುಟ್ಟಿನ ವಿವಾಹ!



‘ವಿವಾಹ್’ ಬೆಡಗಿ ಅಮೃತಾ ರಾವ್ ಗುಟ್ಟಾಗಿ ಮದುವೆಯಾಗಿದ್ದಾರೆಯೇ? ಹೌದು ಎನ್ನುತ್ತಿದ್ದಾರೆ ಬಿ–ಟೌನ್‌ನ ಕೆಲ ಮಂದಿ. ಶಾಹಿದ್ ಕಪೂರ್ ನಾಯಕರಾಗಿದ್ದ ‘ಇಷ್ಕ್ ವಿಷ್ಕ್’ ಚಿತ್ರದ ಮೂಲಕ ಬಾಲಿವುಡ್‌ಗೆ ಕಾಲಿಟ್ಟವರು ಅಮೃತಾ ರಾವ್. ಮೊದಲ ಚಿತ್ರ ತಕ್ಕಮಟ್ಟಿಗೆ ಹೆಸರು ತಂದುಕೊಟ್ಟರೂ, ಅವರನ್ನು ಸಿನಿಮಾ ಪ್ರಿಯರು ಗುರ್ತಿಸುವಂತೆ ಮಾಡಿದ್ದು ಎರಡನೇ ಸಿನಿಮಾ ‘ವಿವಾಹ್’. ಸೂರಜ್ ಬರ್ಜಾತ್ಯ ನಿರ್ದೇಶನದ ಈ ಚಿತ್ರದಲ್ಲಿಯೂ ನಾಯಕರಾಗಿದ್ದವರು ಶಾಹಿದ್ ಕಪೂರ್. 2013ರಲ್ಲಿ ‘ಸಿಂಗ್ ಸಾಬ್ ದಿ ಗ್ರೇಟ್’ ಮತ್ತು ‘ಸತ್ಯಾಗ್ರಹ’ ಚಿತ್ರಗಳಲ್ಲಿ ಕಾಣಿಸಿಕೊಂಡಿದ್ದ ಅಮೃತಾ ಮತ್ತೆ ಬೆಳ್ಳಿತೆರೆಯತ್ತ ಸುಳಿದಿರಲಿಲ್ಲ.

ಈಗ ಬಿ–ಟೌನ್ ಗಲ್ಲಿಗಳಲ್ಲಿ ಹುಟ್ಟಿಕೊಂಡಿರುವ ಗಾಳಿಸುದ್ದಿಯ ಪ್ರಕಾರ ಅಮೃತಾ ರೇಡಿಯೊ ಜಾಕಿ ಅನ್ಮೋಲ್ ಅವರೊಂದಿಗೆ ಗುಟ್ಟಾಗಿ ವಿವಾಹವಾಗಿದ್ದಾರೆ. ವರ್ಸೋವಾದಲ್ಲಿ ಪೋಷಕರೊಂದಿಗಿದ್ದ ಅಮೃತಾ, ವಕೋಲಾದಲ್ಲಿನ ಅನ್ಮೋಲ್ ಮನೆಗೆ ವಾಸ ಬದಲಿಸಿದ್ದಾರಂತೆ. ಅಮೃತಾ ಮತ್ತು ಅನ್ಮೋಲ್ ದೀರ್ಘಕಾಲದಿಂದ ಪ್ರೀತಿಸುತ್ತಿದ್ದರು. ತೀರಾ ಆಪ್ತರ ಉಪಸ್ಥಿತಿಯಲ್ಲಿ ಕೆಲವು ತಿಂಗಳ ಹಿಂದೆಯೇ ಇಬ್ಬರೂ ಹಸೆಮಣೆ ಏರಿದ್ದಾರೆ ಎನ್ನಲಾಗುತ್ತಿದೆ.

ಬಿ–ಟೌನ್ ನಟ, ನಟಿಯರ ಪ್ರೇಮ ಪ್ರಕರಣದ ಬಗ್ಗೆ ಸಾಕಷ್ಟು ಗಾಸಿಪ್‌ಗಳು ಹರಡುತ್ತಿದ್ದರೂ ಅಮೃತಾ–ಅನ್ಮೋಲ್ ಮಾತ್ರ ಅಷ್ಟಾಗಿ ಸುದ್ದಿಯಾಗಿರಲಿಲ್ಲ. ತಮ್ಮ ವೈಯಕ್ತಿಕ ಬದುಕಿನ ಬಗ್ಗೆ ಅಷ್ಟು ಕಟ್ಟುನಿಟ್ಟಾಗಿ ಗುಟ್ಟು ಕಾಪಾಡಿಕೊಂಡು ಬಂದಿದ್ದರು ಅಮೃತಾ. ಇತ್ತೀಚೆಗೆ ನಡೆದ ಫಿಲ್ಮ್ ಫೇರ್ ಪ್ರಶಸ್ತಿ ಸಮಾರಂಭದಲ್ಲಿ ಕಾಣಿಸಿಕೊಂಡ ಅಮೃತಾ ಕೈ ಬೆರಳಲ್ಲಿದ್ದ ನಿಶ್ಚಿತಾರ್ಥದ ಉಂಗುರ ಕ್ಯಾಮೆರಾಗಳಲ್ಲಿ ಸೆರೆಯಾಗಿದೆ. ಇದರ ಬಳಿಕವೇ ಅವರ ಮದುವೆ ಬಗ್ಗೆ ಗುಸುಗುಸು ಹುಟ್ಟಿಕೊಂಡಿರುವುದು. ಆರ್‌ಜೆ ಆಗಿದ್ದ ಅನ್ಮೋಲ್ ಕೂಡ ಈಗ ವೃತ್ತಿ ಬದಲಿಸಿದ್ದಾರೆ. ಕ್ರೀಡಾ ಚಾನೆಲ್ ಒಂದರಲ್ಲಿ ಅವರು ಕಾರ್ಯಕ್ರಮ ನಡೆಸಿಕೊಡುತ್ತಿದ್ದಾರೆ. ಬೆರಳಣಿಕೆಯ ಸಿನಿಮಾಗಳಲ್ಲಿಯೇ ಗಮನ ಸೆಳೆದಿದ್ದ ಅಮೃತಾ ವೃತ್ತಿ ಮತ್ತು ವೈಯಕ್ತಿಕ ಬದುಕಿನ ಹೊಸ ಮನ್ವಂತರದಲ್ಲಿದ್ದಾರೆ.

# ವರುಣ್-ಫಖ್ರಿ ಜೋಡಿ





‘ಸ್ಟೂಡೆಂಟ್ ಆಫ್ ದಿ ಇಯರ್’ ಚಿತ್ರದಲ್ಲಿ ಒಟ್ಟಿಗೆ ಪರಿಚಿತವಾದ ವರುಣ್ ಧವನ್ ಮತ್ತು ಅಲಿಯಾ ಭಟ್ ಜೋಡಿ ನಡುವೆ ಏನೋ ಇದೆ ಎಂದೇ ಲೆಕ್ಕಾಚಾರ ಹಾಕಲಾಗಿತ್ತು. ಅದು ನಿಜವೆಂಬಂತೆ ಇಬ್ಬರೂ ತೆಕ್ಕೆ ಹಾಕಿಕೊಂಡು ಸುತ್ತಾಡುತ್ತಿದ್ದರು. ಬಳಿಕ ಅಲಿಯಾ ಕೈಗೆ ಸಿದ್ಧಾರ್ಥ್ ಮಲ್ಹೋತ್ರಾ ಕೈ ಬೆಸೆದರು. ಬಳಿಕ ವರುಣ್ ಧವನ್ ಹೆಸರು ಬೇರೆ ನಟಿಯರ ಜತೆ ಕೇಳಿಬಂದರೂ, ಯಾವುದೂ ಅಷ್ಟು ಗಂಭೀರವಾಗಿ ಮುಂದುವರಿದಿರಲಿಲ್ಲ.

ಈಗ ವರುಣ್ ಜತೆ ನರ್ಗಿಸ್ ಫಖ್ರಿ ಹೆಸರು ಕೇಳಿಬರುತ್ತಿದೆ. ‘ಮೇ ತೇರಾ ಹೀರೊ’ದ ಸಹನಟಿ ನರ್ಗಿಸ್ ಫಖ್ರಿ ಜತೆಗಿನ ವರುಣ್ ಧವನ್ ಸಂಬಂಧ ಕೇವಲ ಸ್ನೇಹವಾಗಿ ಉಳಿದಿಲ್ಲ ಎಂಬ ಗುಲ್ಲು ಹರಡಿದೆ. ‘ಮೇ ತೇರಾ ಹೀರೊ’ ಚಿತ್ರದ ವೇಳೆ ಇಬ್ಬರೂ ಒಳ್ಳೆಯ ಸ್ನೇಹಿತರಾಗಿದ್ದರು. ಆದರೆ ಇಬ್ಬರ ನಡುವಿನ ಕೆಮಿಸ್ಟ್ರಿ ಅದಕ್ಕೂ ಮೀರಿದ ಬಾಂಧವ್ಯ ಬೆಳೆದಿದೆ ಎನ್ನುತ್ತಾರೆ ಬಾಲಿವುಡ್ ಪಂಡಿತರು. ಇತ್ತೀಚೆಗೆ ನಡೆದ ಸಿನಿಮಾ ಪ್ರಶಸ್ತಿ ಸಮಾರಂಭದಲ್ಲಿ ವರುಣ್ ಪಕ್ಕದಲ್ಲೇ ಆರಂಭದಿಂದ ಕಾರ್ಯಕ್ರಮ ಮುಗಿಯುವವರೆಗೂ ಅವರ ಈ ವಿಶೇಷ ಸ್ನೇಹಿತೆ ಕುಳಿತಿದ್ದರಂತೆ.

ವರುಣ್‌ನಂತೆಯೇ ನರ್ಗಿಸ್ ಹೆಸರೂ ಅನೇಕ ನಟರ ಜತೆ ತಳಕು ಹಾಕಿಕೊಂಡಿತ್ತು. ಉದಯ್ ಚೋಪ್ರಾ ಜತೆ ನರ್ಗಿಸ್ ವಿವಾಹ ಬಂಧನಕ್ಕೆ ಒಳಗಾಗುತ್ತಾಳೆ ಎಂದೇ ನಂಬಲಾಗಿತ್ತು. ಅಷ್ಟರಮಟ್ಟಿಗೆ ಇಬ್ಬರ ಪ್ರೇಮ ಗಾಢವಾಗಿತ್ತು. ಅದು ಗುಟ್ಟಾಗಿಯೂ ಇರಲಿಲ್ಲ. ಆದರೆ ದೀರ್ಘಕಾಲದ ಗೆಳೆತನವನ್ನು ಇತ್ತೀಚೆಗಷ್ಟೇ ಇಬ್ಬರೂ ಕಡಿದುಕೊಂಡಿದ್ದರು. ಬಳಿಕ ರಣಬೀರ್ ಕಪೂರ್, ಶಾಹಿದ್ ಕಪೂರ್, ಹೃತಿಕ್ ರೋಷನ್ ಮುಂತಾದವರ ಜತೆಗೂ ನರ್ಗಿಸ್ ನಂಟಿನ ಬಗ್ಗೆ ಊಹಾಪೋಹಗಳಿದ್ದವು. ಈಗ ವರುಣ್ ಮತ್ತು ನರ್ಗಿಸ್ ಒಟ್ಟಿಗೆ ಸುತ್ತಾಡುತ್ತಿದ್ದು ಎಲ್ಲರ ಹುಬ್ಬು ಮೇಲೇರಿಸಿದ್ದಾರೆ.

■ ಅಮಿ